**ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಟಿ. ಎ. ಶರವಣ ರವರ ನಿಯಮ 72ರಡಿಯಲ್ಲಿ ಗಮನ ಸೆಳೆಯುವ ಸೂಚನೆಗೆ ಉತ್ತರ ಸಲ್ಲಿಸುವ ಬಗ್ಗೆ.**

## ವಿಷಯ

ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ವ್ಯಾಪ್ತಿಗೆ ಸೇರಿದ ಸರ್ಕಾರಿ ಕಿವುಡು ಮತ್ತು ಮೂಕ ಮಕ್ಕಳ ಶಾಲೆಯನ್ನು ಸರ್ಕಾರವು 2025-26 ರಿಂದ ಬೆಂಗಳೂರು ನಗರ ಮತ್ತು ಗ್ರಾಮಾಂತರ ಪ್ರದೇಶದಲ್ಲಿ ಸರ್ಕಾರಿ ವಸತಿ ಶಾಲೆ ಇಲ್ಲದ ಪ್ರಯುಕ್ತ, ವಸತಿಯುತ ಶಾಲೆಯನ್ನಾಗಿ 2025-26ನೇ ಸಾಲಿನಿಂದ ಪ್ರಾರಂಭಿಸಲಾಗಿದೆ. ಸದರಿ ಶಾಲೆಯ ವೆಚ್ಚಗಳಿಗೆ ಸಂಬಂಧಿಸಿದಂತೆ ಆಯ-ವ್ಯಯ ಬಿಡುಗಡೆ ಮಾಡಲಾಗಿದೆ. ಆದರೆ, ಶಾಲೆಗೆ ಅವಶ್ಯವಿರುವ ಅನಾವರ್ತಕ ವೆಚ್ಚಗಳಿಗೆ ಅನುದಾನ ಬಿಡುಗಡೆಯಾಗದ ಪ್ರಯುಕ್ತ ಇದುವರೆಗೂ ಕಟ್ಟಡದ ದುರಸ್ತಿ ಕಾಮಗಾರಿಗಳನ್ನು ಪೂರ್ಣಗೊಳಿಸಿರುವುದಿಲ್ಲ. ಕೆಆರ್ಐಡಿಎಲ್. ಬೆಂಗಳೂರು ನಗರ, ರವರು ಸದರಿ ಶಾಲೆಯ ಮೇಲ್ಛಾವಣಿ ದುರಸ್ತಿ ಮತ್ತು ಇತರೆ ಕಾಮಗಾರಿಗಳನ್ನು ನಿರ್ವಹಿಸುತ್ತಿದ್ದು, ಪ್ರಸ್ತುತ ಬಾಕಿ ಇರುವ ದುರಸ್ತಿ ಕಾಮಗಾರಿಗೆ ಈವರಗೂ ಆಯ-ವ್ಯಯ ಬಿಡುಗಡೆಯಾಗಿರುವುದಿಲ್ಲ. ಸದರಿ ಶಾಲೆಗೆ ಅವಶ್ಯಕ ಮತ್ತು ರಿಪೇರಿ ಕಾಮಗಾರಿಗಳಿಗೆ ಮಾನ್ಯ ಮುಖ್ಯಮಂತ್ರಿಗಳ ವಿಶೇಷ ಅನುದಾನದಿಂದ ಆಯ-ವ್ಯಯ ಬಿಡುಗಡೆ ಮಾಡಿ, ಮಾದರಿ ಶಾಲೆಯನ್ನಾಗಿ ಮಾರ್ಪಡಿಸುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆಯುತ್ತೇನೆ.

## ಉತ್ತರ

ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ವ್ಯಾಪ್ತಿಗೆ ಸೇರಿದ ಸರ್ಕಾರಿ ಕಿವುಡು ಮತ್ತು ಮೂಕ ಮಕ್ಕಳ ಶಾಲೆಗೆ ಕಟ್ಟಡದ ದುರಸ್ತಿ ಹಾಗೂ ಕಟ್ಟಡದ ವಾಟರ್ ಪ್ರೂಫಿಂಗ್ ಕಾಮಗಾರಿಗಳಿಗಾಗಿ ರೂ.23.80 ಲಕ್ಷಗಳು ಮತ್ತು ಶಾಲೆಯ 2ನೇ ಮಹಡಿಯಲ್ಲಿ ದುರಸ್ತಿ ಮತ್ತು ನವೀಕರಣ ಕಾಮಗಾರಿಗಾಗಿ ರೂ.82.15 ಲಕ್ಷಗಳು, ಒಟ್ಟು ರೂ.105.95 ಲಕ್ಷಗಳ ಅಂದಾಜು ಪಟ್ಟಿಯನ್ನು ಕೆ.ಆರ್.ಐ.ಡಿ.ಎಲ್. ಬೆಂಗಳೂರು ನಗರ ಇವರಿಂದ ಪಡೆದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ಇವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

2024-25ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ 2235-02-101-0-99(200) ಕಟ್ಟಡ ನಿರ್ವಹಣೆ ವೆಚ್ಚದಡಿ ರೂ.50.00 ಲಕ್ಷಗಳು ಮಾತ್ರ ನಿಗದಿಯಾಗಿರುವುದರಿಂದ, ಇದರಲ್ಲಿ ರೂ.25.00 ಲಕ್ಷಗಳನ್ನು ಸದರಿ ಶಾಲೆಯ ಕಟ್ಟಡ ಕಾಮಗಾರಿಗಾಗಿ ಬಿಡುಗಡೆ ಮಾಡಲಾಗಿದೆ.

ಪ್ರಸ್ತುತ ವರ್ಷದಲ್ಲಿ ಲೆಕ್ಕ ಶೀರ್ಷಿಕೆ: 2235-02-101-0-99(200) ಕಟ್ಟಡ ನಿರ್ವಹಣೆ ವೆಚ್ಚದಡಿ ರೂ.20.00 ಲಕ್ಷಗಳನ್ನು ಮಾತ್ರ ವಾರ್ಷಿಕ ನಿಗದಿಯಾಗಿದ್ದು, 1ನೇ ಮತ್ತು 2ನೇ ಕಂತುಗಳಲ್ಲಿ ರೂ.10.00 ಲಕ್ಷಗಳು ಸರ್ಕಾರದಿಂದ ಬಿಡುಗಡೆಗೊಳಿಸಲಾಗಿದೆ. ಈ ಅನುದಾನವನ್ನು ಇನ್ನುಳಿದ ಇಲಾಖೆಯಡಿ ನಡೆಯುತ್ತಿರುವ ಸುಧಾರಣಾ ಸಂಸ್ಥೆಗಳು, ಶಾಲೆಗಳು, ಅನುಪಾಲನಾ ಗೃಹಗಳು ಹಾಗೂ ಜಿಲ್ಲಾ ಕಛೇರಿಗಳಿಗೆ ವೆಚ್ಚ ಭರಿಸಬೇಕಾಗಿರುತ್ತದೆ.

**ಸಂಖ್ಯೆ: ಮಮಇ 316 ಪಿಹೆಚ್‌ಪಿ 2025**

(ಲಕ್ಷ್ಮೀ ಆರ್. ಹೆಬ್ಬಾಳಕರ್)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ
ಹಾಗೂ ಹಿರಿಯ ನಾಗರಿಕರ
ಸಬಲೀಕರಣ ಸಚಿವರು.